# ಮುಖಲಿಂಗ ಮಂಟಪ

ಎರಡನೇ 'ದಕ್ಷಿಣ ಕಾಶಿ' ಎಂದೇ ಖ್ಯಾತಿ ಪಡೆದ ಬಾಗಲಕೋಟ ಜಿಲ್ಲೆ ಬಾದಾಮಿ ತಾಲ್ಲೂಕಿನ ಮಹಾಕೂಟದಲ್ಲಿರುವ ಪುಷ್ಕರಣಿಯಲ್ಲಿ ಈ ಮುಖಲಿಂಗ ಮಂಟಪವಿದೆ. ನಾಲ್ಕು ಮುಖಗಳ ಅಪರೂಪದ ಶಿವಲಿಂಗವಿದು. ಅತ್ಯಂತ ಕಲಾತ್ಮಕ ಹಾಗೂ ಸೂಕ್ಷ್ಮ ಕೆತ್ತನೆಯನ್ನು ಇಲ್ಲಿ ಕಾಣಬಹುದು. ಶಿವನ ಶಿರದಲ್ಲಿ ಗುಂಗುರು ಕೂದಲನ್ನು ಸಹ ಶಿಲ್ಪಿ ಮನೋಹರವಾಗಿ ಕೆತ್ತಿದ್ದಾನೆ.

**-ಮಹಾಂತೇಶ ಬಾಗೇವಾಡಿ, ಚೊಳಚಗುಡ್ಡ**





# ಜೋಕುಮಾರ ಸ್ವಾಮಿ

ಕನ್ನಡ ಜನಪದ ಸಾಹಿತ್ಯದಲ್ಲಿ ಜೋಕುಮಾರ ಸ್ವಾಮಿಯ ವರ್ಣನೆಗೆ ವಿಶಿಷ್ಟ ಸ್ಥಾನ. ಭಕ್ತರಿಗೆ ಸಕಲವನ್ನೂ ಕರುಣಿಸುವ ದೇವರು ಎಂಬುದು ಹಲವರ ನಂಬಿಕೆ. ಭಾದ್ರಪದ ಮಾಸದಲ್ಲಿ ಗಣೇಶ ಚವತಿಯ ಸಂಭ್ರಮದ ನಡುವೆಯೇ ಜೋಕುಮಾರ ಸ್ವಾಮಿಯ ಹುಟ್ಟು ಮತ್ತು ಮೆರವಣಿಗೆ ನಡೆಯುತ್ತದೆ. ಉತ್ತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಮನೆ ಮಾತಾಗಿರುವ ಜೋಕುಮಾರನನ್ನು ಶೃಂಗರಿಸಿ ಬುಟ್ಟಿಯಲ್ಲಿ ಕೂರಿಸಿ ಹೊತ್ತು ಸಾಗುತ್ತಾರೆ ಮಹಿಳೆಯರು. ರೈತರು ಕೊಡುವ ಧಾನ್ಯಗಳನ್ನು ಪಡೆದುಕೊಂಡು 'ಮಲ್ಲಿಗೆಯ ಮುಡಿಯುವ ಸೊಸೆ ಬರಲಿ, ಪಲ್ಲಕ್ಕಿ ಮೇಲೆ ಮಗ ಬರಲಿ, ಸಂತಾನದ ಬಳ್ಳಿ ಹಬ್ಬಲಿ' ಎಂದು ಹರಸುತ್ತಾರೆ. ಈ ವರ್ಷ ನಮ್ಮ ಊರಿನಲ್ಲಿ ಕಂಡುಬಂದ ಜೋಕುಮಾರ ಸ್ವಾಮಿಯ ಮೆರವಣಿಗೆಯ ದೃಶ್ಯವಿದು.

**-ಕೆ.ಪಿ. ರಾಮಗುಂಡಿ, ಬೈಲಹೊಂಗಲ**

# ಪರಂಗಿಯವರ ಕಾಲದ ಫಿರಂಗಿ

ಚಿತ್ರದುರ್ಗದ ಮೂರನೇ ಸುತ್ತಿನ ಕೋಟೆ ದ್ವಾರದಿಂದ ನೇರ ಬಲಕ್ಕೆ ತಿರುಗಿದರೆ 'ಬಸವನ ಬುರುಜು' ಪಕ್ಕದ ವಿಶಾಲ ಅಂಕಣದಲ್ಲಿ ಇಡಲಾಗಿರುವ ಫಿರಂಗಿ ಹಿನ್ನಲೆಯಲ್ಲಿ ಝುಂಡಾಬತೇರಿ ಇದೆ. ಫಿರಂಗಿ ಯುದ್ಧಸನ್ನದ್ಧವಾಗಿರುವ ಮಜಲನ್ನು ತೋರುವಂತಿದೆ. ಇದರ ಬಲ ತೋಳಿನಲ್ಲಿ ಬ್ರಿಟಿಷರ ಕಾಲದ ನೋಂದಾಯಿತ ಸಂಖ್ಯೆ, ಕಾರ್ಖಾನೆ ಮತ್ತು ಶತಮಾನ ತೋರುವ ಸ್ಪಷ್ಟ ಸಂಖ್ಯೆಗಳ ವಿವರವಿದೆ. ಮೇಲು ಭಾಗದಲ್ಲಿ ಬ್ರಿಟನ್ ಮಹಾರಾಣಿಯವರ ರಾಜಚಿಹ್ನೆ (ಕಿರೀಟ) ಸಹ ಇದೆ. ಚಿತ್ರದುರ್ಗದ ಇತಿಹಾಸ ಅವಲೋಕಿಸಿದರೆ 1568– 1779 ಪಾಳೇಗಾರರ ಕಾಲಮಾನ. 1779 –1799 ಮೇ 4ರ ವರೆಗೆ ಹೈದರ್ ಮಗ ಟಿಪ್ಪು ಸುಲ್ತಾನನ ಕಾಲಮಾನ. 1799 ರಿಂದ ಬ್ರಿಟಿಷರ ಆಡಳಿತ ದಾಖಲಾಗಿದೆ. ಈ ಫಿರಂಗಿ ಇಲ್ಲಿಗೆ ಬಂದ ಬಗ್ಗೆ, ಉಪಯೋಗವಾದ ಕಾಲಮಾನದ ಕುರಿತು ಸಂಶೋಧಕರು ಬೆಳಕು ಚೆಲ್ಲಬೇಕಾಗಿದೆ.

**-ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ**



